10

# “ಸಭೆಯು” ಏನು ಆಗಿರುತ್ತದೆ?

ಬೇರೆ ದೇಶದ ಮತ್ತು ಸಂಸ್ಕೃತಿಯ ಒಬ್ಬ ಮನುಷ್ಯನು ಧೀರ್ಘಕಾಲದ ಸಂದರ್ಶನಕ್ಕಾಗಿ ಯುಎಸ್‌ಎಗೆ ಪ್ರಯಾಣ ಮಾಡಲು ಬಯಸಿದನು. ಇಂಗ್ಲೀಷ್ ಭಾಷೆ ಕಲಿಯಲು ಬಹಳ ದಿನದಿಂದ ನಿರೀಕ್ಷಿಸುತ್ತಿದ್ದ ಅಮೇರಿಕಾಕ್ಕೆ ಪ್ರಯಾಣ ಮಾಡಿದನು. ಅಲ್ಲಿಗೆ ತಲುಪಿದ ನಂತರ, ಅವನ ಇಂಗ್ಲಿಷ್ ಜ್ಞಾನವು ಪರೀಕ್ಷಿಸಲ್ಪಟ್ಟಿತು. ಹಲವಾರು ವಸ್ತುಗಳನ್ನು ಕೊಳ್ಳುವದಕ್ಕಾಗಿ ಅವನು ಒಂದು ಚಿಕ್ಕ ಕಿರಾಣಿ ಅಂಗಡಿಗೆ ಹೋದನು. ಹಣ ಸ್ವೀಕರಿಸುವಲ್ಲಿ ಅವನು ಎಷ್ಟು ಹಣ ಕೊಡಬೇಕಾಗಿದೆ ಎಂದು ಅವನಿಗೆ ಹೇಳಲ್ಪಟ್ಟಿತು. ಅವನು ಹಣ ತೆಗೆದು ಸರಿಯಾದ ಮೊತ್ತವನ್ನು ಎಣಿಸಿ ಗುಮಾಸ್ತನಿಗೆ ಕೊಟ್ಟನು. ತನ್ನ ದಿನಸುಗಳನ್ನು ಚೀಲದಲ್ಲಿ ಹಾಕಿಕೊಂಡು ಹೊರಡಲು ಸಿದ್ಧನಾದನು. ಅವನು ಬಾಗಿಲು ದಾಟಿ ಹೊರಗೆ ಹೋಗುತ್ತಿದ್ದಂತೆ, ಗುಮಾಸ್ತನು, “Come back!” ಎಂದು ನಮ್ರತೆಯಿಂದ ಹೇಳಿದನು. ಸಂದರ್ಶಕನು ನಿಂತುಕೊಂಡು ಹಿಂದಿರುಗಿ ಗುಮಾಸ್ತನ ಬಳಿಗೆ ಬಂದನು. “ನಿಮಗೆ ಸಹಾಯ ಮಾಡಬೇಕೋ?” ಎಂದು ಗುಮಾಸ್ತನು ಕೇಳಿದನು. ಗಲಿಬಿಲಿಗೊಂಡ ಆ ಮನುಷ್ಯನು, “ಹಿಂದಿರುಗಿ ಬರಬೇಕು ಎಂದು ನೀವು ನನಗೆ ಹೇಳಿದಿರಿ!” ಎಂದನು.

“ನಿಮ್ಮ ವ್ಯಾಪಾರಕ್ಕಾಗಿ ತುಂಬಾ ಉಪಕಾರ; ನಿಮಗೆ ಪುನಃ ಸಹಾಯಮಾಡಲು ಬೇಗನೇ ನಮಗೆ ಅವಕಾಶಕೊಡಿರಿ” ಎಂಬರ್ಥ ಬರುವ ರೀತಿಯಲ್ಲಿ ಅವನು ಹೇಳಿದ್ದನು. ಅದನ್ನು ಈ ಮನುಷ್ಯನು ಅಕ್ಷರಶಃವಾಗಿ ಅರ್ಥಮಾಡಿದನು. ಗುಮಾಸ್ತನ ಉದ್ದೇಶಿತ ಅರ್ಥವನ್ನು ತಪ್ಪಾಗಿ ತಿಳಿದು ಕೊಂಡದ್ದು ಸಂಭಾಷಣೆಯಲ್ಲಿ ತಪ್ಪಾಗಿ ಹೋಯಿತು.

ನಮ್ಮೆಲ್ಲರಿಗೂ ಅವನಿಗಾದ ರೀತಿಯ ಅನುಭವ ಇರುವುದು. ನಮಗೆ ಹೇಳಿದ ಮಾತುಗಳನ್ನು ತಿಳಿದಿರುತ್ತೇವೆ. ಆದರೆ ಮಾತನಾಡುತ್ತಿರುವವರಿಂದ ಅವು ಹೇಗೆ ಉಪಯೋಗಿಸಲ್ಪಟ್ಟಿವೆಯೆಂದು ತಿಳಿದು ಕೊಂಡಿರುವದಿಲ್ಲ - ಪದಗಳನ್ನು ನಾವು ಅರ್ಥ ಮಾಡಿಕೊಳ್ಳುತ್ತೇವೆ. ಆದರೆ ಹೇಳಲ್ಪಟ್ಟದ್ದರ ಅರ್ಥವನ್ನು ಸಂಪೂರ್ಣವಾಗಿ

ತಪ್ಪಿಸಿಕೊಳ್ಳುತ್ತೇವೆ.

ಹೇಗಾದರೂ ನೀವು ಅದರ ಕಡೆಗೆ ನೋಡಿದರೂ, ಸಂಭಾಷಿಸುವುದು ಕಠಿಣ ವಾದದ್ದಾಗಿರುತ್ತದೆ. ಸಂಭಾಷಣೆಯು ಸಾಧ್ಯವಾಗ ಬೇಕಾದರೆ ಮಾತಾಡುವವನಿಗೂ ಕೇಳುವವನಿಗೂ ಬಹಳಷ್ಟು ಬೇಕಾಗುತ್ತದೆ.

ಈ ಸಂಭಾಷಣೆಯ ವಿಧಾನವನ್ನು ಬೈಬಲಿನ ಅಧ್ಯಯನಕ್ಕೆ ಅನ್ವಯಿಸೋಣ. ಬೈಬಲಿಗೂ ಹಾಗೂ ನಮ್ಮ ಮಧ್ಯದಲ್ಲಿ ಲಾಭಕರವಾದ ಸಂಭಾಷಣೆಯ ವಿಧಾನಕ್ಕಾಗಿ ಉಪಯೋಗಿಸಿದ ಪದಗಳನ್ನು ಕೇಳಿಸಿಕೊಳ್ಳು ವದಷ್ಟೇ ಅಲ್ಲ, ಆದರೆ ಪ್ರೇರೇಪಿತ ಬರಹಗಾರರು ತಾವು ಉಪಯೋಗಿಸಲು ಆಯ್ದುಕೊಂಡ ಪದಗಳ ಅರ್ಥ ಯಾವುದಿತ್ತೆಂಬುದನ್ನು ಹುಡುಕಬೇಕು. ಅಂದರೆ ಒಂದು ಪದ ಇಲ್ಲವೇ ವಾಕ್ಯವು ಕಂಡು ಬರುವದರ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕೆಂದು ಅರ್ಥವಾಗುತ್ತದೆ. ದೇವರೊಂದಿಗೆ ಪ್ರಾಮಾಣಿಕತೆಯಿಂದ ಇರುವಂಥದ್ದು ದೇವರು ತನ್ನ ಸಂದೇಶಕ್ಕಾಗಿ ಉದ್ದೇಶಿಸಿದ ಅರ್ಥಕ್ಕಾಗಿ ಜಾಗರೂಕತೆಯ ಹುಡುಕುವಿಕೆಯನ್ನು ಕೇಳುತ್ತದೆ.

"ಸಭೆ" (ಚರ್ಚ್) ಎಂಬ ಪದವು ನಮ್ಮಲ್ಲಿ ಹೆಚ್ಚಾದವರಿಗೆ ಪರಿಚಯ ವಾದದ್ದಾಗಿದೆ. ದೇವರು ಈ ಪದದ ಬಗ್ಗೆ ಪರಿಶುದ್ಧ ಬರಹಗಳಲ್ಲಿ ಬಹಳವಾಗಿ ಮಾತಾಡುತ್ತಾನೆ. ಈ ಪದದ ಬಗ್ಗೆ ದೇವರಿಗೂ ನಮಗೂ ಮಧ್ಯದಲ್ಲಿ ಸಂಪರ್ಕವಾ ಗುವದಕ್ಕಾಗಿ ನಾವು ಬೈಬಲಿನ ಜಗತ್ತಿನೊಳಗೆ ಹೋಗಲು, ಪದದ ಅರ್ಥಗಳನ್ನು, ಉದಾಹರಣೆಗಳನ್ನು ಮತ್ತು ಯೇಸುವಿನಿಂದಲೂ, ಅಪೊಸ್ತಲರಿಂದಲೂ, ದೇವರ ಆತ್ಮನ ಮುಖಾಂತರ ಬೈಬಲನ್ನು ಬರೆದ ಇತರ ಪ್ರೇರೇಪಿತ ಜನರಿಂದಲೂ ಉಪಯೋಗಿಸಿದ ಯೋಚನಾ ರೂಪಗಳನ್ನು ನೋಡಲು ಸಿದ್ಧರಾಗಿರಬೇಕು.

"ಸಭೆಯು" ಏನಾಗಿದೆ? ವಿವಿಧ ಹಿನ್ನೆಲೆಗಳಲ್ಲಿ ಹೊಸ ಒಡಂಬಡಿಕೆಯು ಇಪ್ಪತ್ತೇಳು ಪುಸ್ತಕಗಳಲ್ಲಿಯ ಹದಿನೇಳು ಪುಸ್ತಕಗಳಲ್ಲಿ[1] ಈ ಪದವು 114 ಸಲ[2] ಉಪಯೋಗಿಸಿದ್ದರಲ್ಲಿ ನಮಗೆ ಏನು ಹೇಳಲ್ಪಟ್ಟಿದೆ? ಯೇಸುವು ಸಭೆಯನ್ನು ಸ್ಥಾಪಿಸುವಾಗ, ಆತನು ಏನನ್ನು ಕಟ್ಟಿರುವನು?

## ಆತ್ಮಿಕ ದೇಹ

ಸಭೆಯು ಆತ್ಮಿಕ ದೇಹ, ಕ್ರಿಸ್ತನ ಆತ್ಮಿಕ ದೇಹವೇ ಆಗಿದೆಯೆಂದು ಮೊದಲು ನಾವು ತಿಳಿದುಕೊಳ್ಳಬೇಕು.

"ಚರ್ಚ್" ಎಂಬ ಪದದೊಂದಿಗೆ ಸಾಮಾನ್ಯವಾಗಿ ನಮ್ಮ ಮನಸ್ಸುಗಳಲ್ಲಿ ಬರುವ ಚಿತ್ರವು ಆರಾಧನೆಯು ನಡಿಸಲ್ಪಡುವ ಪ್ರಾಕೃತ ಕಟ್ಟಡವಾಗಿರುತ್ತದೆ. ಈ ಅರ್ಥವನ್ನು ಹೇಳುವದಕ್ಕಾಗಿ ಈ ಪದವು ಹೊಸ ಒಡಂಬಡಿಕೆಯಲ್ಲಿ ಎಂದೂ

ಉಪಯೋಗಿಸಲ್ಪಟ್ಟಿರುವದಿಲ್ಲ.

ಪರಿಶುದ್ಧ ಬರಹಗಳಲ್ಲಿ "ಸಭೆ" ಎಂಬ ಪದವು ಕ್ರಿಸ್ತನ ಸುವಾರ್ತೆಗೆ ಒಪ್ಪಿಸಿಕೊಡಲ್ಪಟ್ಟವರ ಹಾಗೂ ಒಂದಾಗಿ ಕೂಡಿಬಂದವರ, ಸ್ಥಳಿಕ ಹಾಗೂ ಸಾರ್ವತ್ರಿಕ ಅರ್ಥಗಳಲ್ಲಿ ಕ್ರಿಸ್ತನ ರಕ್ತದಿಂದ ವಿಮೋಚಿಸಲ್ಪಟ್ಟವರ ಸಮೂಹವನ್ನು ಸೂಚಿಸುತ್ತದೆ.

ಮೊದಲನೆಯದು, ಅವರು ಕೂಡಿ ಬರುವುದು ಇಲ್ಲವೇ ದೇವರನ್ನು ಆರಾಧಿಸಲಿಕ್ಕೆ ಕೂಡಿಬರುವಂಥ ವಿಮೋಚಿತರ ಸಮೂಹವು "ಸಭೆ" ಎಂದು ಕರೆಯಲ್ಪಟ್ಟಿದೆ. ಕೊರಿಂಥದಲ್ಲಿಯ ಸಭೆಯನ್ನು ಅವರಲ್ಲಿಯ ಐಕ್ಯತೆಯ ಕೊರತೆಗಾಗಿ ಪೌಲನು ಅವರನ್ನು ಗದರಿಸುವಾಗ, ಅವನು "ಸಭೆ" ಎಂಬ ಪದವನ್ನು ಕ್ರೈಸ್ತರ ಕೂಟಕ್ಕಾಗಿ ಉಪಯೋಗಿಸಿದನು. "... ನೀವು ಸಭೆಯಾಗಿ ಕೂಡಿಬರುವಾಗ ನಿಮ್ಮಲ್ಲಿ ಭೇದಗಳು ಉಂಟಾಗುತ್ತದೆಂದು ಕೇಳುತ್ತೇನೆ" (1 ಕೊರಿಂಥ 11:18) ಎಂದು ಅವನು ಹೇಳಿದನು.

ಅನಂತರ "ಸಭೆ" ಎಂಬ ಪದವು ನಿಶ್ಚಿತವಾದ ಸ್ಥಳದಲ್ಲಿಯ ವಿಮೋಚಿತರ ಗುಂಪಿಗಾಗಿ ಉಪಯೋಗಿಸಲ್ಪಟ್ಟಿದೆ. ಕೊರಿಂಥದಲ್ಲಿಯ ವಿಮೋಚಿತರ ಗುಂಪು, "ಕೊರಿಂಥದಲ್ಲಿನ ದೇವರ ಸಭೆ" ಎಂದು (1 ಕೊರಿಂಥ 1:2ಎ) ಕರೆಯಲ್ಪಟ್ಟಿದೆ.

ಇನ್ನೂ ಮುಂದೆ ಹೋಗಿ, "ಸಭೆ" ಎಂಬ ಪದವು ಜಗತ್ತಿನಲ್ಲೆಲ್ಲಾ ಇರುವ ವಿಮೋಚಿತರ ಇಡೀ ಗುಂಪಿಗಾಗಿ ಉಪಯೋಗಿಸಲ್ಪಟ್ಟಿದೆ. "ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ. ಕ್ರಿಸ್ತನೋ ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ" (ಎಫೆಸ 5:23) ಎಂದು ಹೇಳಿದಾಗ, ಪೌಲನು ಸಭೆಯನ್ನು ಜಾಗತಿಕ ಅರ್ಥದಲ್ಲಿ ಸಂಬಂಧಿಸಿ ಹೇಳಿದ್ದಾನೆ.

"ಸಭೆ" ಎಂಬ ಪದವನ್ನು ಹೊಸ ಒಡಂಬಡಿಕೆಯು ಉಪಯೋಗಿಸಿದ್ದನ್ನು ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿಯ ವಿಶಿಷ್ಟವಾದ ಘಟನೆಗೆ ಅನ್ವಯಿಸೋಣ. ಪಂಚಾಶತ್ತಮ ಹಬ್ಬದ ದಿನದಂದು ಯೆರೂಸಲೇಮಿನಲ್ಲಿದ್ದ ಅನೇಕ ಸ್ಥಳೀಯ ನಿವಾಸಿಗಳೂ, ಸಂದರ್ಶಕರೂ (ಅಪೊಸ್ತಲರ ಕೃತ್ಯಗಳು 2:1-4) ಪರಿಶುದ್ಧಾತ್ಮನ ಸುರಿಸುವಿಕೆಯ ಬಾಹ್ಯ ಸಂಕೇತಗಳನ್ನು ಕೇಳಿಸಿಕೊಂಡರು, ಏನಾಗುತ್ತಿದೆಯೆಂಬುದನ್ನು ನೋಡಲು ಅಪೊಸ್ತಲರ ಸುತ್ತಲೂ ಕೂಡಿ ಬಂದರು. ಜನಸಮೂಹಕ್ಕೆ ಪೇತ್ರನು ಪ್ರಸಂಗಿಸಿದಾಗ ಯೇಸುವು ಕರ್ತನೂ, ಕ್ರಿಸ್ತನೂ ಆಗಿದ್ದಾನೆಂದು ನಂಬುವಂತೆ ಮಾಡಿದನು (ಅಪೊಸ್ತಲರ ಕೃತ್ಯಗಳು 2:36). ಪ್ರಾಣದ ನೋವಿನಲ್ಲಿ ಅನೇಕರು "ನಾವೇನು ಮಾಡೋಣ?" (ಅಪೊಸ್ತಲರ ಕೃತ್ಯಗಳು 2:37ಬಿ) ಎಂದು ಕೂಗಿದರು. ಅವರ ಕೂಗನ್ನು ವಿಶ್ವಾಸವು ನಿರ್ದೇಶಿಸಿದ್ದರಿಂದ ಪೇತ್ರನು ಅವರಿಗೆ ನಂಬಬೇಕೆಂದು ಹೇಳುವ ಅವಶ್ಯಕತೆಯಿರಲಿಲ್ಲ. ಆದರೆ ಅವರು ಮಾಡದೇ ಇದ್ದುದನ್ನು - ತಮ್ಮ ಪಾಪದ ಕ್ಷಮಾಪಣೆಗಾಗಿ ಮಾನಸಾಂತರ ಪಟ್ಟು ಬಾಪ್ತಿಸ್ಮ

ಹೊಂದುವದನ್ನು ಹೇಳುವ ಅಗತ್ಯತೆ ಅವನಿಗಿತ್ತು (ಅಪೊಸ್ತಲರ ಕೃತ್ಯಗಳು 2:38). ಮೂರು ಸಾವಿರ ಜನರು ಸಂತೋಷದಿಂದ ರಕ್ಷಣೆಯ ಮಾರ್ಗವನ್ನು ಸ್ವೀಕರಿಸಿದರು, ಮಾನಸಾಂತರ ಪಟ್ಟರು ಮತ್ತು ತಮ್ಮ ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಹೊಂದಿದರು (ಅಪೊಸ್ತಲರ ಕೃತ್ಯಗಳು 2:38, 41).

ಆ ದಿನ ಏನು ಸಂಭವಿಸಿತು ಎಂಬುದನ್ನು, ಲೂಕನು ಹೇಗೆ ವಿವರಿಸಿದನೆಂಬುದನ್ನು ಗಮನಿಸಿರಿ. ಮಾರ್ಪಾಟು ಹೊಂದಿದವರು ಮೊದಲು ಏನಾಗಿದ್ದರೆಂಬುದನ್ನು ವಿವರಿಸಿದನು (ಅಪೊಸ್ತಲರ ಕೃತ್ಯಗಳು 2:41). ಕರ್ತನ ವಾಕ್ಯಕ್ಕೆ ವಿಧೇಯರಾದವರು, ಕರ್ತನ ಸಭೆಯೊಳಗೆ ಇರುವವರಾಗಿ ಮಾಡಲ್ಪಟ್ಟರು, ಅವರು ಗುಂಪಿನ, ಅನ್ಯೋನ್ಯತೆಯ ಭಾಗವಾದರು. ಎರಡನೆಯದಾಗಿ, ಅವರ ಹೊಸ ರೀತಿಯ, ನಡತೆಯ ಮಾತುಗಳಲ್ಲಿ ಲೂಕನು ವಿವರಿಸಿದನು. ದೇವರ ಕಡೆಗಿರುವ ಅವರ ನಡತೆಯಲ್ಲಿ ಅವರಿಗೆ ನೂತನ ಜೀವವಿತ್ತು (ಅಪೊಸ್ತಲರ ಕೃತ್ಯಗಳು 2:42). ವಿಮೋಚಿಸಲ್ಪಟ್ಟ ಈ ಜನರ ಗುಂಪು ದೇವರನ್ನು ಆರಾಧಿಸಿತು ಮತ್ತು ಅಪೊಸ್ತಲರಿಂದ ದೈವಿಕ ಮಾರ್ಗದರ್ಶನವನ್ನು ಪಡೆದುಕೊಂಡಿತು. ಒಬ್ಬರ ಕಡೆಗೆ ಒಬ್ಬರಿಗಿದ್ದ ಅವರ ನಡತೆಯಲ್ಲಿ ಹೊಸಜೀವ ಇತ್ತು, (ಅಪೊಸ್ತಲರ ಕೃತ್ಯಗಳು 2:44, 45). ಹೊತ್ತು ಕೊಳ್ಳುವದರಿಂದ, ಹಂಚಿಕೊಳ್ಳುವದರಿಂದ ಹಾಗೂ ಜೋಪಾಸನೆ ಮಾಡುವದರಿಂದ ಒಬ್ಬರನ್ನೊಬ್ಬರು ನೋಡಿಕೊಂಡರು - ಒಬ್ಬರೊಬ್ಬರ ಭಾರವನ್ನು ಹೊತ್ತುಕೊಂಡರು, ಕೊರತೆಯುಳ್ಳವರೊಂದಿಗೆ ಹಂಚಿಕೊಂಡರು, ಒಬ್ಬರಿಗೊಬ್ಬರು ಜೋಪಾಸನೆ ಮಾಡಿಕೊಂಡರು. ವಿಶ್ವಾಸಿಗಳ ಈ ಗುಂಪು ಅನಂತರದಲ್ಲಿ ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ "ಸಭೆ" ಎಂದು ಹೇಳಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 5:11).

ಯೆರೂಸಲೇಮಿನಲ್ಲಿಯ ಈ ವಿಮೋಚನೆ ಹೊಂದಿದವರು ದೇವರನ್ನು ಆರಾಧಿಸಲು ಒಂದಾಗಿ ಕೂಡಿ ಬರುವಾಗ ಅವರು "ಸಭೆ"ಯಾಗಿದ್ದರು (ಒಂದಾಗಿ ಕೂಡಿ ಬರುವ ಅರ್ಥದಲ್ಲಿ). ಯೆರೂಸಲೇಮಿನಲ್ಲಿಯ ವಿಮೋಚನೆ ಹೊಂದಿದವರೆಲ್ಲರೂ "ಯೆರೂಸಲೇಮಿನಲ್ಲಿಯ ಸಭೆ" ಎಂದು ಕರೆಯಲ್ಪಡ ಬಹುದು. (ಆ ಸ್ಥಳಿಕ ಅರ್ಥದಲ್ಲಿ) ಆ ಸಭೆಯು ಬೆಳವಣಿಗೆಯೊಂದಿ ಪ್ರಸಾರಣೆಯಾದಾಗ, ಜಗತ್ತಿನಲ್ಲಿಯ ವಿಮೋಚನೆ ಹೊಂದಿದ ಜನರೆಲ್ಲರೂ ಆ ಸಮಯದಲ್ಲಿ "ಯೇಸುವು ಪುನಃ ಬರುವಾಗ ಆತನು ತನ್ನ ಸಭೆಯನ್ನು ಸ್ವೀಕರಿಸಲಿರುವನು (ವಿಶ್ವದ ಅರ್ಥದಲ್ಲಿ) ಹಾಗೂ ಅದನ್ನು ಪರಲೋಕಕ್ಕೆ ತೆಗೆದು ಕೊಂಡು ಹೋಗುವನು ಎಂದು ಹೇಳುವದರಿಂದ ಸೂಚಿಸಲ್ಪಟ್ಟಿತು."

## ಸಜೀವ ರಚನೆಯಾಗಿದೆ

ಎರಡನೆಯದು, ಸಭೆಯನ್ನು ಒಂದು ರಚನೆಯಂತೆ - ಸಜೀವವಾದದ್ದಾಗಿ ನಾವು ನೋಡುವ ಅಗತ್ಯತೆಯಿದೆ.

"ಸಭೆ" ಯೆಂದು ಕರೆಯಲ್ಪಡುವ ರಕ್ಷಿಸಲ್ಪಟ್ಟ ಜನರ ಗುಂಪನ್ನು ಒಂದು ಸಂಸ್ಥೆಯಂತೆ, ಒಂದು ರೀತಿಯ ಮಾನವ ಸಂಘಟನೆಯಂತೆ ಕೆಲವರು ಯೋಚಿಸುತ್ತಾರೆ. ಅದು ಒಬ್ಬರು ಕೂಡಿಸುವಂಥ ಇಲ್ಲವೇ ಅದಕ್ಕೆ ತನ್ನನ್ನು ವಾಗ್ದಾನವಾಗಿ ಕೊಡುವಂಥ ಹಾಗೂ ಇದಕ್ಕಿಂತ ಹೆಚ್ಚಾದದ್ದಲ್ಲವೆಂದು ದೃಷ್ಟಿಸುತ್ತಾರೆ.

ವಿಮೋಚಿತ ಜನರ ಒಂದು ದೇಹದಂತೆ, ಸಭೆಯು ಜೀವಿಸುವ ರಚನೆಯಾಗಿದೆ; ಆದರೆ ಮಾನವ ಸಂಸ್ಥೆಯಾಗಿರುವದಿಲ್ಲ. ಕ್ರಿಸ್ತನು ಸ್ಥಾಪಿಸಿದ ಸಭೆಯು ದೇವರ ಜೀವನದೊಂದಿಗೂ ಆಶೀರ್ವಾದಗಳೊಂದಿಗೂ ಜೀವಿಸುವಂಥದ್ದೂ; ಚಟುವಟಿಕೆಯುಳ್ಳದ್ದೂ ಆಗಿದೆ. ಮನುಷ್ಯನ ಜ್ಞಾನದಿಂದ, ರಚನೆಯಿಂದ ಹಾಗೂ ಚಟುವಟಿಕೆಗಳಿಂದ ಸಂಪೂರ್ಣವಾಗಿ ಬಲಪಡಿಸಲು ಮಾನವ ನಿರ್ಮಿತ ಗುಂಪಾ ಗಿರುವದಿಲ್ಲ.

ಪೌಲನು ಕೊರಿಂಥದಲ್ಲಿಯ ಸಭೆಯನ್ನು ಆಲಯ, ಪರಿಶುದ್ಧಸ್ಥಳ ಇಲ್ಲವೇ ದೇವರ ವಾಸಸ್ಥಾನ ಎಂದು ವಿವರಿಸಿದನು. "ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ?" ಎಂದು 1 ಕೊರಿಂಥ 3:16ರಲ್ಲಿ ಹೇಳಿದ್ದಾನೆ.[3] ಅನಂತರದಲ್ಲಿ 1 ಕೊರಿಂಥ 6:19, 20ರಲ್ಲಿ ಪೌಲನು ವೈಯಕ್ತಿಕ ಕ್ರೈಸ್ತರನ್ನು ದೇವರ ಆಲಯದಂತೆ ಚಿತ್ರಿಸಿ, ಜಾರತ್ವವು ಒಬ್ಬ ವ್ಯಕ್ತಿಯ ದೇಹಕ್ಕೆ ವಿರುದ್ಧವಾಗಿ ಮಾಡುವ ಪಾಪವಾಗಿದೆಯೆಂದು ಖಂಡಿಸಿದ್ದಾನೆ. 1 ಕೊರಿಂಥ 3:16 ಸಭೆಗೆ ಸಂಬಂಧಿಸಿದೆ, ಆದರೆ ವೈಯಕ್ತಿಕ ಕ್ರೈಸ್ತನಿಗೆ ಅಲ್ಲ.[4] ದೇವರು ತನ್ನ ಜನರ ಮಧ್ಯದಲ್ಲಿ ವಾಸಿಸುವನೆಂದು ಪೌಲನು ದೃಢಪಡಿಸುತ್ತಿದ್ದಾನೆ. ಆತನು ವೈಯಕ್ತಿಕವಾಗಿ ತನ್ನ ಜನರಲ್ಲಿ ವಾಸಿಸುತ್ತಾನೆ (1 ಕೊರಿಂಥ 6:19, 20) ಹಾಗೂ ಒಟ್ಟಾಗಿ ಜೀವಿಸುತ್ತಾನೆ (1 ಕೊರಿಂಥ 3:16). ಹಳೇ ಒಡಂಬಡಿಕೆಯ ಸಮಯದಲ್ಲಿ ದೇವರ ವಾಸಸ್ಥಾನವು ಅರಣ್ಯದಲ್ಲಿ ಗುಡಾರದಲ್ಲಿ ಇತ್ತು. ಹಾಗೂ ಅನಂತರದಲ್ಲಿ ಯೆರೂಸಲೇಮಿನಲ್ಲಿಯ ದೇವಾಲಯದಲ್ಲಿ ಇತ್ತು; ಆದರೆ ಕ್ರೈಸ್ತ ಯುಗದಲ್ಲಿ ಪೌಲನ ಪ್ರಕಾರವಾಗಿ, ದೇವರು ತನ್ನ ಸಭೆಯಲ್ಲಿ, ತನ್ನ ಜನರಲ್ಲಿ ವಾಸಿಸುತ್ತಾನೆ.

ಸಭೆಯನ್ನು ಸಜೀವ ಕಟ್ಟಡಕ್ಕೆ ಹೋಲಿಸಬಹುದು. ಎಫೆಸದ ಕ್ರೈಸ್ತರು ಏನಾಗಿರುವರೆಂಬುದನ್ನು ಉದಾಹರಿಸುವಾಗ, ಅವರು ಕ್ರೈಸ್ತರನ್ನೊಳಗೊಂಡ ಒಂದು ಕಟ್ಟಡವಾಗಿ ಮಾಡಲ್ಪಟ್ಟಿರುವರು ಮತ್ತು ಬೆಳವಣಿಗೆಯು ನಿರಂತರವಾದ ಹಂತದಲ್ಲಿರುವುದು ಎಂದು ಹೇಳಿದನು. "ಅತನಲ್ಲಿ ಕಟ್ಟಡದ ಎಲ್ಲಾ ಭಾಗಗಳು ಒಂದಕ್ಕೊಂದು ಹೊಂದಿಕೆಯಾಗಿ ಕಟ್ಟಡವು ವೃದ್ಧಿಯಾಗುತ್ತಾ ಕರ್ತನಲ್ಲಿ ಪರಿಶುದ್ಧ

ದೇವಾಲಯವಾಗುತ್ತದೆ. ಆತನಲ್ಲಿ ನೀವು ಸಹ ಪರಿಶುದ್ಧಾತ್ಮನ ಮೂಲಕವಾಗಿ ದೇವರಿಗೆ ನಿವಾಸಸ್ಥಾನವಾಗುವದಕ್ಕಾಗಿ ನಮ್ಮ ಸಂಗಡ ಕಟ್ಟಲ್ಪಡುತ್ತಾ ಇದ್ದೀರಿ" (ಎಫೆಸ 2:21, 22) ಎಂದು ಪೌಲನು ಹೇಳಿದನು. ಅವನು ವಿವರಿಸಿದ ಕಟ್ಟಡವು ಅಪೊಸ್ತಲರ ಹಾಗೂ ಪ್ರವಾದಿಗಳ ಅಸ್ತಿವಾರದ ಮೇಲೆ ಕ್ರಿಸ್ತನು ಮುಖ್ಯವಾದ ಮೂಲೆಗಲ್ಲಾಗಿರುವದರೊಂದಿಗೆ ನಿಂತಿರುವುದು. ಕಟ್ಟಡದ ರಚನೆಯು ಕ್ರೈಸ್ತರಿಂದ ಮಾಡಲ್ಪಟ್ಟಿರುವುದು. ಕಟ್ಟಡಕ್ಕೆ ಮುಚ್ಚಳವಾಗಲೀ, ಮಾಳಿಗೆಯಾಗಲೀ ಇರುವದಿಲ್ಲ: ಜನರು ಸುವಾರ್ತೆಗೆ ವಿಧೇಯರಾಗುತ್ತ ಅದಕ್ಕೆ ಕೂಡಿಸಲ್ಪಡುವಂತೆ ಅದು ನಿರಂತರವಾಗಿ ಮೇಲುಕ್ಕೇರುತ್ತಾ ಹೋಗುವುದು.

ಸಭೆಯು ಒಂದು ಸಂಸ್ಥೆಯಾಗಿರುವದಿಲ್ಲ, ದೇವರ ಆತ್ಮನು ವಾಸಿಸುತ್ತಿರುವ ಸಜೀವ ಶರೀರ ರಚನೆಯಾಗಿದೆ. ಅದು ದೇವರ ಜೀವದೊಂದಿಗೆ ಸಜೀವವಾಗಿರುವ ಸಜೀವ ರಚನೆಯಾಗಿದೆ. ಅದು ದೇವರ ಜೀವದೊಂದಿಗೆ ಸಜೀವವಾಗಿರುವ ಮತ್ತು ದೇವರ ಆತ್ಮನಿಗಾಗಿ ವಾಸಸ್ಥಳವಾಗಿರುವ ಕ್ರೈಸ್ತರ ಸಭೆಯಾಗಿದೆ. ಸಭೆಯು ಭೂಲೋಕದಲ್ಲಿ ದೇವರ ನಿವಾಸ ಸ್ಥಳವಾಗಿದೆಯೆಂದು ನೀವು ಹೇಳಬಹುದು.

## ನಿಕಟ ಸಂಬಂಧ

ಮೂರನೆಯದು, ಸಭೆಯನ್ನು ಕ್ರಿಸ್ತನೊಂದಿಗೆ ನಿಕಟ ಸಂಬಂಧದಂತೆ ಯೋಚಿಸಬೇಕು.

ಭೂಲೋಕದ ದೃಷ್ಟಿಕೋನದಿಂದ, ಸಭೆಯೊಳಗಿನ ಸದಸ್ಯತ್ವವನ್ನು ಕುರಿತು ಜನರ ಗುಂಪಿನೊಂದಿಗೆ, ಸಭೆಯನ್ನು ಮಾಡುವ ಜನರೊಂದಿಗೆ ವಿಶೇಷವಾದ ಸಂಬಂಧದಲ್ಲಿ ಪ್ರವೇಶಿಸುವ ಮಾತುಗಳಲ್ಲಿ ಯೋಚಿಸುವುದು ಸುಲಭವಾಗಿದೆ. ಸಭೆಯ ಈ ದೃಷ್ಟಿಕೋನವು ಮಹತ್ವದ ಸತ್ಯವನ್ನು ತಪ್ಪಿಸಿಕೊಳ್ಳುತ್ತದೆ. ಸಭೆಯು ಬಲವಾದ, ನಿಕಟವಾದ, ಮುಂದುವರಿಯುವ ಸಂಬಂಧವನ್ನು ಒಳಗೊಂಡಿರುತ್ತದೆ: ಆ ಸಂಬಂಧವು *ಯೇಸುವಿ*ನೊಂದಿಗೆ ನಿಜವಾದ ಸಂಬಂಧದ ಮೇಲೆ ಕೇಂದ್ರೀಕರಿಸಲ್ಪಟ್ಟಿರುತ್ತದೆ.

ಯೇಸುವಿನೊಂದಿಗೆ ಸಭೆಗೆ ಸರಿಯಾಗಿ ಇರುವ ಸಂಬಂಧವು ದೇಹ/ ಶಿರಸ್ಸಿನ ಸಂಬಂಧದಂತೆ ವಿವರಿಸಲ್ಪಟ್ಟಿದೆ. ಕ್ರೈಸ್ತರು ದೇಹವಾಗಿದ್ದರೆ ಯೇಸುವು ಶಿರಸ್ಸು ಆಗಿದ್ದಾನೆ. ದೇವರು ಸಭೆಯನ್ನು ಕ್ರಿಸ್ತನ ಆತ್ಮಿಕ ದೇಹವಾಗಿ, ಭೂಲೋಕ ದಲ್ಲಿ ಇಂದು ಅದೃಶ್ಯವಾದ ಕ್ರಿಸ್ತನ ದೃಶ್ಯವಾದ ಭಾಗವಾಗಿ ಮಾಡಿದ್ದಾನೆ. ಕರ್ತನು ಭೂಲೋಕದಲ್ಲಿಯ ವಿಮೋಚನೆಯ ತನ್ನ ಕಾರ್ಯವನ್ನು ಪೂರೈಸಲು ಪ್ರಕೃತ ದೇಹದ ಅಗತ್ಯತೆಯುಳ್ಳವನಾಗಿದ್ದನು. ಈಗ ಆತನಿಗೆ ಪ್ರತಿಯೊಬ್ಬರಿಗೂ ಎಲ್ಲಾ ಕಡೆಗಳಲ್ಲಿಯೂ ಆತನ ವಿಮೋಚನಾ ಕಾರ್ಯವು ಲಭ್ಯವಿರುವಂತೆ

ಮಾಡುವ ಆತ್ಮಿಕ ದೇಹದ ಅಗತ್ಯತೆಯಿರುವುದು. ಆದುದರಿಂದ ಪಂಚಾಶತ್ತಮ ದಿನದಂದು, ಯೇಸು ಸತ್ತವರೊಳಗಿಂದ ಪುನರುತ್ಥಾನ ಹೊಂದಿದ ನಂತರದ ಐವತ್ತು ದಿನಗಳಾದ ಮೇಲೆ ಪರಿಶುದ್ಧಾತ್ಮನು ಕ್ರಿಸ್ತನ ಆತ್ಮಿಕ ದೇಹವನ್ನು ಅಂದರೆ ಸಭೆಯನ್ನು ರೂಪಿಸಲು ಇಳಿದು ಬಂದನು. ಆ ದಿನದಿಂದ ಇಲ್ಲಿಯವರೆಗೆ ಪ್ರತಿಯೊಬ್ಬ ವಿಮೋಚಿತ ವ್ಯಕ್ತಿಯು ಆತನ ವಿಮೋಚನಾ ಕಾರ್ಯದ ಸಮಯದಲ್ಲಿ, ದೇಹದಲ್ಲಿ ದೇವರ ಅತ್ಯುನ್ನತವಾದ ಕೃಪೆಯಿಂದ ಇಡಲ್ಪಟ್ಟಿರುವನು.

ಹೀಗೆ ಹೊಸ ಒಡಂಬಡಿಕೆಯಲ್ಲಿ ಸಭೆಯು ಪ್ರೇರೇಪಣೆ ಹೊಂದಿದ ಬರಹಗಾರರಿಂದ ಸಾಮಾನ್ಯವಾಗಿ ಕ್ರಿಸ್ತನ "ದೇಹ" ಎಂದು ಕರೆಯಲ್ಪಟ್ಟಿದೆ (ಎಫೆಸ 1:21-23; 5:23). ಕ್ರಿಸ್ತನ ಸುವಾರ್ತೆಗೆ ವಿಧೇಯರಾಗುವವರು ಭೂಲೋಕ ದಲ್ಲಿ ಕ್ರಿಸ್ತನ ಆತ್ಮಿಕ ದೇಹವಾಗುವರು ಹಾಗೂ ಅದರೊಂದಿಗೆ ಅಕ್ಷರಶಃವಾಗಿ ಕಾರ್ಯಮಾಡುವರು. ಶಿರಸ್ಸಾದ ಕ್ರಿಸ್ತನಿಂದ ನಡಿಸಲ್ಪಡುವರು. ಆದುದರಿಂದ ಒಬ್ಬನು ಬಾಪ್ತಿಸ್ಮ ಹೊಂದುವಾಗ, ಅವನು "ಕ್ರಿಸ್ತನಲ್ಲಿ" (ರೋಮಾಪುರ 6:3; ಗಲಾತ್ಯ 3:27) ಇಲ್ಲವೇ "ಒಂದೇ ದೇಹದೊಳಗೆ" (1 ಕೊರಿಂಥ 12:13) ಬಾಪ್ತಿಸ್ಮ ಹೊಂದುವವರೆಂದು ಹೊಸ ಒಡಂಬಡಿಕೆಯು ಸ್ಪಷ್ಟವಾಗಿ ಹೇಳುತ್ತದೆ.

ಸಭೆಗೆ ಯೇಸುವಿನೊಂದಿಗೆ ನಿಕಟವಾದ ಸಂಬಂಧವಿದೆ. ಅದರೊಳಗೆ ಭೂಲೋಕದಲ್ಲಿ ಒಬ್ಬ ವ್ಯಕ್ತಿಯು ಪ್ರವೇಶಿಸಬಹುದು. ಸಭೆಯು ಕ್ರಿಸ್ತನ ಪರಿ ಪೂರ್ಣತೆಯಾಗಿದೆ. ಯಾಕಂದರೆ ಆತನ ದೇಹವು ಎಲ್ಲದರಲ್ಲಿ ಎಲ್ಲವನ್ನೂ ನೆರ ವೇರಿಸುವಾತನ ಪರಿಪೂರ್ಣತೆಯಲ್ಲಿ ಇರುತ್ತದೆ (ಎಫೆಸ 1:23). ಕ್ರಿಸ್ತನು ಸಭೆಯ ಪರಿಪೂರ್ಣತೆಯಾಗಿರುತ್ತಾನೆ (ಕೊಲೊಸ್ಸೆ 2:10). ಆತನ ದೇಹವಾದ ಸಭೆಯು ತಲೆಯಾದ ಕ್ರಿಸ್ತನಿಲ್ಲದೇ ಸಂಪೂರ್ಣವಾದದ್ದಾಗಿರುವದಿಲ್ಲ (ಎಫೆಸ 1:22). ಅದೇ ರೀತಿಯಲ್ಲಿ ಶಿರಸ್ಸಾದ ಕ್ರಿಸ್ತನು ತನ್ನ ದೇಹವಾದ ಸಭೆಯಿಲ್ಲದೇ ಸಂಪೂರ್ಣವಾ ಗಿರಲಾರನು (ಕೊಲೊಸ್ಸೆ 1:18). ಸಭೆಯ ಶಿರಸ್ಸಾಗಿರುವಂಥದ್ದೆಲ್ಲವೂ ಸಭೆಗೆ ಒಳಪಟ್ಟಿರುತ್ತದೆ ಹಾಗೂ ಸಭೆಯಾಗಿರುವಂಥದ್ದೆಲ್ಲವೂ ಅದರ ಶಿರಸ್ಸಾದ ಕ್ರಿಸ್ತನಿಗೆ ಒಳಪಟ್ಟಿರುತ್ತದೆ. ಆದುದರಿಂದ ಆತನ ಸಭೆಯಾಗಿ ಕ್ರೈಸ್ತನು ಅನುದಿನವೂ ಯೇಸುವಿನೊಂದಿಗೆ ಸತತವಾದ ಸಹಭಾಗಿತ್ವವನ್ನು ಅನುಭವಿಸುತ್ತಾನೆ. ಕ್ರಿಸ್ತನಲ್ಲಿರುವವರು ಕ್ರೈಸ್ತತ್ವದ ಕೇವಲ ಅಧ್ಯಾಪಕರಾಗಿರುದಿಲ್ಲ; ಅವರು ಕ್ರಿಸ್ತನನ್ನು ಹೊಂದಿಕೊಂಡವರಾಗಿರುತ್ತಾರೆ. ಆತನ ದೇಹದಲ್ಲಿರುವವರಿಗಾಗಿ ಕ್ರಿಸ್ತನ ಪರಿಪೂರ್ಣವಾದ ಬುಗ್ಗೆಯು ತೆರೆದಿರುತ್ತದೆ.

ಎಫೆಸ 5ರಲ್ಲಿ ಪೌಲನು ಸಭೆಯ ಬಗ್ಗೆ ಚರ್ಚಿಸಿದಾಗ, ಕ್ರಿಸ್ತನೊಂದಿಗಿನ ಅದರ ಸಂಬಂಧವನ್ನು ಗಂಡ/ಹೆಂಡತಿಯರ ಸಂಬಂಧದ ರೂಪಕವನ್ನು ಉಪಯೋ ಗಿಸುವವರಿಂದ ಹೋಲಿಸಿದ್ದಾನೆ. ಕ್ರಿಸ್ತನು ಗಂಡನಿಗೆ, ಸಭೆಯು ಹೆಂಡತಿಗೆ ಉದಾಹರಣೆಯಾಗಿದ್ದಾರೆ. ಮೊದಲು ಅವನು ಈ ಸಂಬಂಧವನ್ನು ತಾತ್ವಿಕವಾಗಿ

ಹೇಳಿದ್ದಾನೆ. ಗಂಡನು ಹೆಂಡತಿಗೆ ಶಿರಸ್ಸಾಗಿರುವಂತೆ ಕ್ರಿಸ್ತನು ಸಭೆಗೆ ಶಿರಸ್ಸಾಗಿದ್ದಾನೆ (ಎಫೆಸ 5:23). ಎರಡನೆಯದಾಗಿ, ಅವನು ಈ ಸಂಬಂಧವನ್ನು *ರೂಢಿಯಲ್ಲಿ ಇಲ್ಲವೇ ಕಾರ್ಯದಲ್ಲಿ* ಅನ್ವಯಿಸಿ ಮಾತಾಡಿದ್ದಾನೆ. ಹೆಂಡತಿಯು ತನ್ನ ಗಂಡನಿಗೆ ಅಧೀನಳಾಗಿರುವಂತೆ, ಸಭೆಯು ಕ್ರಿಸ್ತನಿಗೆ ಅಧೀನವಾಗಿರ ಬೇಕು. ಅದು ಯೇಸುವನ್ನು ತನ್ನ ಶಿರಸ್ಸಿನಂತೆ, ನಾಯಕನಂತೆ ಹಾಗೂ ಮಾರ್ಗದರ್ಶಿಯಂತೆ ನೋಡಬೇಕು (ಎಫೆಸ 5:24). ಅಂತಿಮವಾಗಿ ಪೌಲನು ಈ ಉದ್ದೇಶದಲ್ಲಿಯ ಸಂಬಂಧವನ್ನು ಚರ್ಚಿಸಿದನು. ಗಂಡನು ತನ್ನ ಹೆಂಡತಿಯನ್ನು ಪ್ರೀತಿಸುವಂತೆ, ಕ್ರಿಸ್ತನು ಸಭೆಯನ್ನು ಪ್ರೀತಿಸುತ್ತಾನೆ ಮತ್ತು ತನ್ನಲ್ಲಿಯ ವಿಶ್ವಾಸಿಗಳ ಈ ದೇಹವನ್ನು ನಿತ್ಯತ್ವದಲ್ಲಿ ತನ್ನೊಂದಿಗೆ ಜೀವಿಸಲು ಸಿದ್ಧಪಡಿಸುತ್ತಿರುವನು (ಎಫೆಸ 5:25-27).

ಹೊಸ ಒಡಂಬಡಿಕೆಯ ಸಭೆಯು ತನ್ನ ಹೃದಯದಲ್ಲಿ ಕ್ರಿಸ್ತನೊಂದಿಗಿನ ಸಂಬಂಧದಲ್ಲಿದೆ. ಪ್ರಾರಂಭವಾಗಿ ಅದು ಜನರೊಂದಿಗಿನ ಸಂಬಂಧವಾಗಿರುವದಿಲ್ಲ. ಆದರೆ ಅದು ಒಬ್ಬನೇ ತಂದೆಯು ಮಕ್ಕಳು ಒಬ್ಬರಿಗೊಬ್ಬರು ಸಂಬಂಧಿಸಿದಂತೆ ಅದು ಕೂಡಲೇ ಇತರ ಕ್ರೈಸ್ತರೊಂದಿಗಿನ, ಸಭೆಯ ಇತರ ಸದಸ್ಯರೊಂದಿಗಿನ ಸಂಬಂಧದಲ್ಲಿ ಪರಿಣಾಮಗೊಳ್ಳುತ್ತದೆ. ಕ್ರಿಸ್ತನ ದೇಹದ ಸದಸ್ಯರು ಒಬ್ಬರೊಬ್ಬರ ಸದಸ್ಯರಾಗಿರುವರು. ಆದರೆ ಮೊದಲು ಹಾಗೂ ಬಹಳವಾಗಿ ಸಭೆಯು ಕ್ರಿಸ್ತನ ದೇಹವಾಗಿದೆ. ಕ್ರಿಸ್ತನ ಸಭೆಯ ಸದಸ್ಯರಾಗಿರುವದಕ್ಕೆ ನಾವು ಕ್ರಿಸ್ತನೊಂದಿಗೆ ಸಂಬಂಧದಲ್ಲಿ ಪ್ರವೇಶಿಸತಕ್ಕದ್ದು. ದೇಹವು ಶಿರಸ್ಸಿನೊಂದಿಗೆ ಒಳಪಟ್ಟಿರುವಂತೆ ನಾವು ಆತನ ಭಾಗಗಳಾಗಿರುವುದು ನಿಕಟವಾದ ಮತ್ತು ವಿಶೇಷವಾದ ಸಂಬಂಧವಾಗಿರುತ್ತದೆ.

## ಮುಕ್ತಾಯ

ಅನೇಕರು "ಸಭೆ" ಎಂಬ ಪದದ ಯೋಗ್ಯವಾದ ಅರ್ಥದ ಬಗ್ಗೆ ಗಲಿಬಿಲಿಗೊಂಡಿದ್ದಾರೆ. ಅಂತಹಾ ಗಲಿಬಿಲಿಯು ಅಸ್ತಿತ್ವದಲ್ಲಿರಬೇಕಾಗಿಲ್ಲ. ಯಾಕಂದರೆ ಬೈಬಲು ಅದರ ಅರ್ಥದ ಮೇಲೆ ಸ್ಪಷ್ಟವಾಗಿದೆ.

"ಸಭೆಯು" ಏನಾಗಿದೆ? ಅದು ಕ್ರಿಸ್ತನ ಸುವಾರ್ತೆಗೆ ವಿಧೇಯರಾದ, ಆತನ ಜನಾಂಗವಾದ ಮತ್ತು ಕೊಡಲ್ಪಟ್ಟ ಸಮಾಜದ ಬಗ್ಗೆ ಆತನ ಜನರಾಗಿ ಆರಾಧಿಸುವ ಹಾಗೂ ಕಾರ್ಯಮಾಡುವದರಿಂದ ಮಾಡಲ್ಪಟ್ಟ ಆತ್ಮಿಕ ದೇಹವಾಗಿದೆ. ಅವರು ಆತನ ಹೆಸರನ್ನು ಧರಿಸಿದವರು ಹಾಗೂ ಭೂಲೋಕದ ಮೇಲೆ ಆತನ ಆತ್ಮಿಕ ದೇಹವಾಗಿರುವರು. ಎಲ್ಲಾ ವಿಷಯಗಳಲ್ಲಿ ಅವರು ಕ್ರಿಸ್ತನನ್ನು ಗೌರವಿಸುವರು. ಈ ಆತ್ಮಿಕ ದೇಹವು ಜೀವಿಸುವ ರಚನೆಯಾಗಿದ್ದು ಅದರಲ್ಲಿ ದೇವರ ಆತ್ಮನು

ವಾಸಿಸುತ್ತಾನೆ. ಸಭೆಯ ಭಾಗವಾಗಿರುವುದು ಅಂದರೆ ಮಾನವ ಸಂಸ್ಥೆಯಲ್ಲಿ ಭಾಗಿಗಳಾಗುವುದು ಇಲ್ಲವೇ ಒಂದು ಗುಂಪಿನಲ್ಲಿ ಸದಸ್ಯತ್ವ ಹೊಂದಿರುವದಷ್ಟೇ ಆಗಿರುವದಿಲ್ಲ. ಅದರ ಅರ್ಥ ಕ್ರಿಸ್ತನೊಂದಿಗೆ ನಿಕಟವಾದ, ಮುಂದುವರಿಯುತ್ತಿರುವ ಸಂಬಂಧವಿರುವುದೆಂಬ ಅರ್ಥವಾಗುತ್ತದೆ.

ಸಭೆಯು, ಕ್ರಿಸ್ತನ ದೇಹವು, ವಿಶ್ವಾಸದಿಂದ ಪ್ರವೇಶಿಸಲ್ಪಡುತ್ತದೆ. ಈ ವಿಶ್ವಾಸದ ಉತ್ತರವು ಮಾನಸಾಂತರವನ್ನು (ಅಪೊಸ್ತಲರ ಕೃತ್ಯಗಳು 17:30, 31), ಯೇಸು ದೇವರ ಕುಮಾರನಾಗಿರುವನೆಂಬ ಅರಿಕೆಯನ್ನು (ರೋಮಾಪುರ 10:10) ಹಾಗೂ ಕ್ರಿಸ್ತನಲ್ಲಿ ಬಾಪ್ತಿಸ್ಮವನ್ನು (ರೋಮಾಪುರ 6:3; ಗಲಾತ್ಯ 3:27) ಒಳಗೊಂಡಿರುತ್ತದೆ. ಬಾಪ್ತಿಸ್ಮಾದಲ್ಲಿ ಒಬ್ಬನ ಪಾಪಗಳು ತೊಳೆಯಲ್ಪಟ್ಟಿವೆ, ಅವನ ನೂತನ ಜನನ ಸಂಪೂರ್ಣವಾಗುತ್ತದೆ. ಅವನು ಕ್ರಿಸ್ತನ ದೇಹದ ಭಾಗವಾಗುತ್ತಾನೆ (ಅಪೊಸ್ತಲರ ಕೃತ್ಯಗಳು 2:38, 41, 47; 22:16; 1 ಕೊರಿಂಥ 12:13).

ಹೊಸ ಒಡಂಬಡಿಕೆಯ ಸಭೆಯು ಒಂದು ಸಭಾ ಪಂಗಡವಾಗಿರುವದಿಲ್ಲ. ಸಭಾ ಪಂಗಡಗಳು ಮಾನವ ನಿರ್ಮಿತವಾದವುಗಳು; ಹೊಸ ಒಡಂಬಡಿಕೆಯಲ್ಲಿನ ಸಭೆಯು ಕರ್ತನಿಂದ ರೂಪಿಸಲ್ಪಟ್ಟಿದೆ, ಸೃಷ್ಟಿಸಲ್ಪಟ್ಟಿದೆ, ಜನರಿಂದ ತುಂಬಿಸಲ್ಪಟ್ಟಿದೆ ಹಾಗೂ ಕರ್ತನಿಂದ ಮುಂದುವರಿಸಲ್ಪಟ್ಟಿದೆ. ಸಭಾಪಂಗಡಗಳು ಭೂಲೋಕ ದಿಂದ, ಮನುಷ್ಯನಿಂದ ಬರುತ್ತವೆ; ಹೊಸ ಒಡಂಬಡಿಕೆಯ ಸಭೆಯು ಪರಲೋಕ ದಿಂದ ದೇವರಿಂದ ಬರುತ್ತದೆ. ಸಭೆಯು ಕ್ರಿಸ್ತನಿಗೆ ಒಳಪಟ್ಟಿರುತ್ತದೆ - ಅದು ಆತನ ಹೆಸರನ್ನು ಧರಿಸಿರುತ್ತದೆ, ಅದು ಆತನ ಆರಾಧನೆಗಾಗಿ ಒಂದಾಗಿ ಕೂಡಿ ಬರುತ್ತದೆ, ಲೋಕದಲ್ಲಿ ಆತನ ಕಾರ್ಯಮಾಡುತ್ತದೆ, ಆತನ ಆತ್ಮನು ಅದರಲ್ಲಿ ವಾಸಿಸುತ್ತಾನೆ (13ನೇ ಅಧ್ಯಾಯದಲ್ಲಿಯ "ಹೊಸ ಒಡಂಬಡಿಕೆಯ ಸಭೆ" ಎಂಬ ಚಾರ್ಟನ್ನು ನೋಡಿರಿ).

ರಕ್ಷಣೆಯು ತನ್ನ ಶರತ್ತುಗಳ ಮೇಲೆ ತನ್ನ ಸಭೆಯೊಳಗೆ ಪ್ರವೇಶಿಸಲು (ಪ್ರಕಟನೆ 22:17) ಹಾಗೂ ಆತನ ಸಭೆಯಾಗಿ ಈ ಲೋಕದಲ್ಲಿ ಜೀವಿಸಲು ಎಲ್ಲಾ ಜನರಿಗೆ ಕ್ರಿಸ್ತನಿಂದ ಆಹ್ವಾನವು ಕೊಡಲ್ಪಟ್ಟಿದೆ.

## ಅಧ್ಯಯನ ಪ್ರಶ್ನೆಗಳು

*(ಉತ್ತರಗಳು ಪುರಾವಣಿ 1ರಲ್ಲಿವೆ)*

1. ಪರಿಶುದ್ಧ ಬರಹಗಳಲ್ಲಿ "ಸಭೆ" ಎಂಬಂಥ ಪದಗಳನ್ನು ಪರಿಶುದ್ಧಾತ್ಮನು ಹೇಗೆ ಉಪಯೋಗಿಸುತ್ತಾನೆ ಎಂಬುದನ್ನು ತಿಳಿಯಲಿಕ್ಕೆ ಹೇಗೆ ಅವಶ್ಯವಾಗಿದೆ?
2. ಹೊಸ ಒಡಂಬಡಿಕೆಯಲ್ಲಿ "ಸಭೆ" ಎಂಬ ಪದವು ಉಪಯೋಗಿಸಲ್ಪಟ್ಟ ವಿವಿಧ ರೂಪಗಳನ್ನು ಚರ್ಚಿಸಿರಿ.

3. ಸಭೆಯು ದೇವರ ಆಲಯವಾಗಿದೆ. ಇದು ಕ್ರೈಸ್ತನ ಜೀವನದಲ್ಲಿ ಇದರ ಅರ್ಥವೇನು? ಸಭೆಗಾಗಿರುವ ಈ ಹೆಸರು ಅದರ ಸದಸ್ಯರು ಹೇಗೆ ಜೀವಿಸಬೇಕು, ಕಾರ್ಯಮಾಡಬೇಕು ಹಾಗೂ ಆರಾಧಿಸಬೇಕು ಎಂಬುದನ್ನು ಸೂಚಿಸುತ್ತದೆಯೋ?
4. ಯಾವ ಅರ್ಥದಲ್ಲಿ ಸಭೆಯು "ಜೀವಿಸುವ" ಕಟ್ಟಡವಾಗಿದೆ?
5. ಯಾವ ವಿಧಗಳಲ್ಲಿ ಗಂಡ/ಹೆಂಡತಿಯ ಸಂಬಂಧವು ಯೇಸುವಿನೊಂದಿಗೆ ಸಭೆಯ ಸಂಬಂಧವನ್ನು ಉದಾಹರಿಸುತ್ತದೆ?
6. ಒಬ್ಬನು ಕ್ರಿಸ್ತನ ಸಭೆಯನ್ನು ಹೇಗೆ ಪ್ರವೇಶಿಸುವನೆಂಬುದನ್ನು ಸ್ಪಷ್ಟವಾಗಿ ವಿವರಿಸಿರಿ.
7. ಯಾವ ಅರ್ಥದಲ್ಲಿ ಸಭೆಯು ಕ್ರಿಸ್ತನಿಗೆ ಅದ್ವಿತೀಯವಾಗಿ ಒಳಪಟ್ಟಿರುತ್ತದೆ?

## ಪದ ಸಹಾಯಗಳು

ಡಿನಾಮಿನೇಷನ್ - ಬೈಬಲ್‌ನಲ್ಲಿ ಕಂಡು ಬರದ ವಿಶಿಷ್ಟವಾದ ಹೆಸರಿನೊಂದಿಗೆ ವಿಶಿಷ್ಟವಾದ ನಂಬಿಕೆಗಳೊಂದಿಗೆ ಇರುವ ಹಾಗೂ ಒಂದು ರೀತಿಯ ಮಂಡಳಿಯಿಂದ ನಡಿಸಲ್ಪಡುತ್ತಿರುವ ಧಾರ್ಮಿಕ ಸಭೆಗಳ ಗುಂಪು, *ಹೊಸ ಒಡಂಬಡಿಕೆಯಲ್ಲಿ ಯಾವುದೇ ಸಭಾಪಂಗಡಗಳು (ಡಿನಾಮಿನೇಷನ್ಸ್) ಕಂಡು ಬಾರದ್ದರಿಂದ ಇದು ಬೈಬಲಿನ ಪದವಾಗಿರುವದಿಲ್ಲ.*

ಅನ್ಯೋನ್ಯತೆ - ಆಸಕ್ತಿಗಳನ್ನು, ಆದರ್ಶಗಳನ್ನು, ಅನುಭವಗಳನ್ನು ಹಂಚಿಕೊಳ್ಳುವುದು, ಒಬ್ಬರು ಇನ್ನೊಬ್ಬರಿಗಾಗಿ ಕ್ರೈಸ್ತರ ಹೃದಯಗಳನ್ನು ತುಂಬಿಕೊಳ್ಳುವ ಪ್ರೀತಿ.

ಹಾದರ - ಲೈಂಗಿಕ ಪಾಪ; ಮದುವೆಯಾಗದೇ ಲೈಂಗಿಕ ಸಂಪರ್ಕ.

---

ಟಿಪ್ಪಣಿಗಳು

[1]Ibid. "ಸಭೆ" ಎಂಬ ಪದವು ಮಾರ್ಕ, ಲೂಕ, ಯೋಹಾನ, 2 ತಿಮೊಥಿ, ತೀತ, 1 ಮತ್ತು 2 ಪೇತ್ರ, 1 ಮತ್ತು 2 ಯೋಹಾನ ಇಲ್ಲವೇ ಯೂದ - ಇವುಗಳಲ್ಲಿ ಉಪಯೋಗಿಸಲ್ಪಟ್ಟಿರುವದಿಲ್ಲ. [3]"ದೇವಾಲಯ" ಎಂಬುದಕ್ಕೆ ಗ್ರೀಕ ಭಾಷೆಯಲ್ಲಿ ಎರಡು ಪದಗಳಿವೆ: *naos* ಹಾಗೂ *hieron* ಈ ವಾಕ್ಯಗಳಲ್ಲಿ ದೇವಾಲಯ ಎಂಬದಕ್ಕೆ ಪೌಲನು ಉಪಯೋಗಿಸಿದ್ದು *naos* ಆದರೆ *hieron* ಅಲ್ಲ. *Naos* ಎಂಬುದು ನಿಜವಾದ ದೇವಾಲಯವನ್ನು, ಪವಿತ್ರ ಸ್ಥಳವನ್ನು ಸೂಚಿಸುತ್ತದೆ, ಆದರೆ *hieron* ಎಂಬ ಪದ ಸೂಚಿಸುವಂತೆ ದೇವಾಲಯದ ಕಟ್ಟಡ ಸಂಕೀರ್ಣವನ್ನಲ್ಲ. ಕ್ರಿಸ್ತನ ದೇಹವು ದೇವರು ವಾಸಿಸುವ ಸ್ಥಳವಾಗಿದೆಯೆಂದು ಪೌಲನು ದೃಢಪಡಿಸುತ್ತಿದ್ದನು. [4]ಈ ವಾಕ್ಯದಲ್ಲಿ "ನೀವು" ಎಂಬುದು ದ್ವಿತೀಯ ಪುರುಷ ಬಹುವಚನದಲ್ಲಿ ಗ್ರೀಕ ಪಠ್ಯದಲ್ಲಿ ಇದೆ. 1 ಕೊರಿಂಥ 6:19, 20ರಲ್ಲಿಯಂತೆ ಒಬ್ಬ ವೈಯಕ್ತಿಕ ವ್ಯಕ್ತಿಗೆ ಅಲ್ಲ ಆದರೆ ಇಲ್ಲಿ ಜನರ ಒಂದು ಗುಂಪಿಗೆ ಇದು

**ಸಂಬಂಧಿಸಿದೆ.** [2]Ethelbert W. Bullinger, *A Critical Lexicon and Concordance to the English and Greek New Testament* (Grand Rapids, Mich.: Zondervan, 1975), 153.